# ಜಿಲ್ಲಾ ಪಂಚಾಯತ್ ಕಾರ್ಯಾಲಯ, ತುಮಕೂರು.

ದೂರವಾಣಿ ಸಂಖ್ಯೆ: 0816 - 2278429 E-mail : dsdeveloptmk@gmail.com

ಸಂಖ್ಯೆ:ತುಜಿಪ/ಅಭಿ/ವಿವ/359/2015-16 ದಿನಾಂಕ: 16/04/2016.

ಗೆ,

ಪ್ರಾಜೆಕ್ಟ್ ಅಸೋಸಿಯೇಟ್,
ಎನ್.ಆರ್.ಡಿ.ಎಂ.ಎಸ್ ಸೆಲ್,
ಜಿಲ್ಲಾ ಪಂಚಾಯತ್, ತುಮಕೂರು.

**ವಿಷಯ :** ಮಹಾತ್ಮಗಾಂಧಿ ನರೇಗಾ ಯೋಜನೆ ಅನುಷ್ಠಾನಕ್ಕೆ ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಹುದ್ದೆ ಭರ್ತಿಗಾಗಿ ಅರ್ಜಿ ಆಹ್ವಾನಿಸಲು ಪ್ರಕಟಣೆ ನೀಡುವ ದಾಖಲೆಗಳನ್ನು **ಜಿಲ್ಲಾ ಪಂಚಾಯತ್, ವೆಬ್‌ಸೈಟ್‌ನಲ್ಲಿ** ಪ್ರಕಟಿಸುವ ಕುರಿತು.

**ಉಲ್ಲೇಖ :** ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಎಂ.ಜಿ.ಎನ್.ಆರ್.ಇ.ಜಿ,ಎ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ:ಗ್ರಾಅಪ97/ಸಾಪನಿ(ಉಖಾಯೋ) 2016/ ದಿನಾಂಕ: 02/04/2016.

-*********-

ಮೇಲಿನ ವಿಷಯದನ್ವಯ, ಮಹಾತ್ಮಗಾಂಧಿ ನರೇಗಾ ಯೋಜನೆ ಅನುಷ್ಠಾನಕ್ಕೆ ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಹುದ್ದೆ ಭರ್ತಿಗಾಗಿ ಅರ್ಜಿ ಆಹ್ವಾನಿಸಲು ಅಗತ್ಯ ದಾಖಲಾತಿಗಳನ್ನು ಇದಕ್ಕೆ ಲಗತ್ತಿಸಿದೆ. *ಸದರಿ ದಾಖಲಾತಿಗಳನ್ನು* **ಜಿಲ್ಲಾ ಪಂಚಾಯತ್, ವೆಬ್‌ಸೈಟ್‌ನಲ್ಲಿ** ಪ್ರಕಟಿಸಲು ಹಾಗೂ ಪ್ರಕಟಿಸಿದ ನಂತರ ವರದಿ ನೀಡಲು ತಿಳಿಸಿದೆ.

**ಲಗತ್ತು : 6 ಪುಟಗಳು**

ಉಪಕಾರ್ಯದರ್ಶಿ(ಅಭಿವೃದ್ಧಿ)
ಜಿಲ್ಲಾ ಪಂಚಾಯತ್, ತುಮಕೂರು.
16.4.16

ನೇಮಕಾತಿ ವೇಳಾಪಟ್ಟಿ ಈ ಕೆಳಕಂಡಂತೆ ಇರುತ್ತದೆ:

| ಕ್ರ.ಸಂ | ವಿವರ | ದಿನಾಂಕ | ಷರಾ |
|---|---|---|---|
| 1. | ಅರ್ಜಿ ಪ್ರಕಟಣೆ | 18-4-2016 | |
| 2. | ಆಯ್ಕೆ ಸಮಿತಿ ರಚನೆ ಬಗ್ಗೆ ಪ್ರಕಟಣೆ | 11-5-2016 | |
| 3. | ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ | 10-5-2016 | ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಇರುವುದಿಲ್ಲ ಅವಧಿ ಮೀರಿ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ವಿಳಂಬಕ್ಕೆ ಇಲಾಖೆ ಹೊಣೆಗಾರರಲ್ಲ. |
| 4. | ಅಭ್ಯರ್ಥಿಗಳ ಸಂಕ್ಷೇಪಿತ ಗೊಳಸುವಿಕೆ | 13-5-2016 | ಜಿಲ್ಲಾ ಪಂಚಾಯತ್ ವೆಬ್‌ಸೈಟ್ ನಲ್ಲಿ ಪ್ರಕಟಣೆ |
| 5. | ಸಂಕ್ಷೇಪಿತ ಗೊಳಸಿದ ಪಟ್ಟಿ ಪ್ರಕಟಣೆ | 16-5-2016 | |
| 6 | ಸಂದರ್ಶನ | 23-5-2016 | ಸಂಕ್ಷೇಪಿತಗೊಳಸಿದ ಅರ್ಜಿಗಳ ಪಟ್ಟಿ ವೆಬ್‌ಸೈಟ್‌ನಲ್ಲಿ ಪ್ರಕಟಣೆ ಪರಿಶೀಲಿಸಿ ಸಂದರ್ಶನಕ್ಕೆ ಹಾಜರಾಗುವುದು ಅಭ್ಯರ್ಥಿಗಳ ಹೊಣೆ |

## ಜಿಲ್ಲಾ ಪಂಚಾಯತ್ ಕಾರ್ಯಾಲಯ __________ ಜಿಲ್ಲೆ

**ನರೇಗಾ ಸಾಮಾಜಿಕ ಪರಿಶೋಧನಾ ಸಂಘ (ಮಹಾತ್ಮಗಾಂಧಿ ನರೇಗಾ ಯೋಜನೆ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಹುದ್ದೆಯ ನೇಮಕಾತಿಗಾಗಿ ಅರ್ಜಿ ನಮೂನೆ**

| | | |
|---|---|---|
| 1 | ಅರ್ಜಿದಾರರ ಹೆಸರು | |
| 2 | ಹುಟ್ಟಿದ ದಿನಾಂಕ ಮತ್ತು ವಯಸ್ಸು<br>(ಧೃಡೀಕೃತ ದಾಖಲೆ ಲಗತ್ತಿಸುವುದು) | |
| 3 | ಅ) ಶೈಕ್ಷಣಿಕ ವಿದ್ಯಾರ್ಹತೆ<br>ಅಂಗೀಕೃತ ವಿಶ್ವವಿದ್ಯಾಲಯದ ಪದವಿ (ಧೃಡೀಕೃತ ದಾಖಲೆಗಳನ್ನು ಲಗತ್ತಿಸುವುದು)<br>ಆ) ಕಂಪ್ಯೂಟರ್ ಪರಿಜ್ಞಾನ<br>(ಧೃಡೀಕರಣ ಪ್ರತಿ ಲಗತ್ತಿಸುವುದು) | |
| 4. | ಅಂಚೆ ವಿಳಾಸ | |
| 5. | ಸ್ಥಿರ ದೂರವಾಣಿ/ಮೊಬೈಲ್ ಸಂಖ್ಯೆ<br>ಇ-ಮೇಲ್ ವಿಳಾಸ | |
| 6. | ದೈಹಿಕ ಸಾಮರ್ಥ್ಯ<br>(ಧೃಡೀಕೃತ ಪ್ರತಿ ಲಗತ್ತಿಸಿರುವುದು) | |
| 7. | Weightage ಪರಿಗಣಿಸಲು ಪೂರಕ ದಾಖಲೆಗಳು<br>ಅನುಭವದ ಅರ್ಹತೆಗಳು:<br>**ಅಪೇಕ್ಷಣೆಯ**<br>1. ಸಾಮಾಜಿಕ ಪರಿಶೋಧನೆ ನಿರ್ವಹಿಸಿದ ಅನುಭವ – 3 ವರ್ಷ<br>2. ಸ್ವಯಂ ಸೇವಾ ಸಂಘ/ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವ – 5 ವರ್ಷ<br>ನರೇಗಾ ಕಾರ್ಯಕ್ರಮದ ಅನುಭವ – 2 ವರ್ಷ | |
| 8. | ಹಾಲಿ ನಿರ್ವಹಿಸುತ್ತಿರುವ ಉದ್ಯೋಗದ ವಿವರ | |
| 9. | ನಿರ್ದೇಶನಾಲಯದ ಷರತ್ತು ಮತ್ತು ನಿಬಂಧನೆಗಳ ಸೇವಾ ಒಪ್ಪಂದಕ್ಕೆ ಸಹಿ ಹಾಕಲು ಒಪ್ಪಿಗೆ ಇದೆಯೇ | |

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ

9) ಸ್ವೀಕೃತವಾಗುವ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ಸಂಕ್ಷೇಪಿತ ಪಟ್ಟಿಯನ್ನು ಆಧರಿಸಿ ನಿಗಧಿತ ದಿನಾಂಕದಂದು ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. 1:5 ಪ್ರಮಾಣದಲ್ಲಿ ಅಭ್ಯರ್ಥಿಗಳ ಸಂಕ್ಷೇಪಿತ ಪಟ್ಟಿಯನ್ನು ತಯಾರಿಸಿ ಸಂದರ್ಶನಕ್ಕೆ ಕರೆಯಲಾಗುವುದು.

ಅರ್ಜಿ ಸಲ್ಲಿಸಬೇಕಾದ ವಿಳಾಸ :

ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ,
ಜಿಲ್ಲಾ ಪಂಚಾಯತ್,
(ಕಛೇರಿ ವಿಳಾಸ ಮತ್ತು ವೆಬ್‌ಸೈಟ್ ವಿಳಾಸ ನಮೂದಿಸುವುದು

10) ಸಾಮಾಜಿಕ ಪರಿಶೋಧನಾ ಸಂಸ್ಥೆಯಲ್ಲಿ ಜಿಲ್ಲಾ ಸಂಯೋಜಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸಿರುವ ಅಭ್ಯರ್ಥಿಗಳು ಲಗತ್ತಿಸಿರುವ ನಮೂನೆಯಲ್ಲಿ ಭರ್ತಿಮಾಡಿದ ಅರ್ಜಿಯನ್ನು ಅವಶ್ಯಕ ದಾಖಲೆಗಳೊಂದಿಗೆ ಮೊಹರಾದ ಲಕೋಟೆಯಲ್ಲಿರಿಸಿ, ಲಕೋಟೆ ಮೇಲೆ ಹುದ್ದೆಯ ಹೆಸರನ್ನು ನಮೂದಿಸಿ ಸಲ್ಲಿಸುವುದು.

ಅರ್ಜಿಗಳನ್ನು ನಿಗಧಿತ ದಿನಾಂಕ ಮತ್ತು ಸಮಯದೊಳಗೆ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಲು ಸೂಚಿಸಿದೆ. ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಮತ್ತು ಅಂಚೆ ವಿಳಂಬದಿಂದ ಸ್ವೀಕೃತವಾಗುವ ಅರ್ಜಿಗಳನ್ನು ಸಹ ಪರಿಗಣಿಸಲಾಗುವುದಿಲ್ಲ.

11) ಅರ್ಜಿಯ ಜೊತೆಗೆ ಈ ಕೆಳಕಂಡ ದೃಢೀಕೃತ ದಾಖಲಾತಿಗಳನ್ನು ಒದಗಿಸುವುದು.

ಅ) ಜನ್ಮದಿನಾಂಕ ಕುರಿತು ಎಸ್.ಎಸ್.ಎಲ್.ಸಿ., ಪ್ರಮಾಣ ಪತ್ರ
ಆ) ವಿದ್ಯಾರ್ಹತೆ ಕುರಿತು ದೃಢೀಕೃತ ದಾಖಲಾತಿ ಪ್ರತಿಗಳು
ಇ) ಅನುಭವದ ಕುರಿತು ಪ್ರಮಾಣ ಪತ್ರ

A

1) **ಹುದ್ದೆಗಳ ಸಂಖ್ಯೆ:** ----------

2) **ವಯಸ್ಸಿನ ಅರ್ಹತೆ** – ಗರಿಷ್ಠ 35

3) **ಶೈಕ್ಷಣಿಕ ಅರ್ಹತೆಗಳು** – ಪದವಿ ಪೂರ್ವ ಶಿಕ್ಷಣ ಮತ್ತು ಕಂಪ್ಯೂಟರ್ ಬಳಕೆ ಬಗ್ಗೆ ಜ್ಞಾನ.

4) **ಕನ್ನಡ ಭಾಷೆ ಜ್ಞಾನ ಕಡ್ಡಾಯ.**

5) **ಅಪೇಕ್ಷಣೀಯ ಅನುಭವ** –ಸಾಮಾಜಿಕ ಪರಿಶೋಧನೆ ನಿರ್ವಹಿಸಿದ ಅನುಭವ –3 ವರ್ಷ
ಸ್ವಯಂ ಸೇವಾ ಸಂಘ/ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ-5 ವರ್ಷ
ನರೇಗಾ ಕಾರ್ಯಕ್ರಮದ –2 ವರ್ಷ ಅನುಭವ

6) **ಸಂದರ್ಶನದ ಸಮಯದಲ್ಲಿ ನೀಡುವ ಅಂಕಗಳ ಮಾನದಂಡಗಳು.**

– ಸಂದರ್ಶನದ ಸಮಿತಿಯ ಪ್ರತಿ ಸದಸ್ಯರುಗಳು ಪ್ರತಿ ಅಭ್ಯರ್ಥಿಗಳಿಗೆ ನೀಡುವ 25 ಅಂಕಗಳಿಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಲಾಗುವುದು.

| **ಮಾನದಂಡಗಳು** | |
|---|---|
| ಅ) ನರೇಗಾ ಜ್ಞಾನ | – 5 ಅಂಕ |
| ಆ) ಕಂಪ್ಯೂಟರ್ ಬಳಕೆ ಜ್ಞಾನ | – 5 ಅಂಕ |
| ಇ) ಸಾಮಾಜಿಕ ಪರಿಶೋಧನೆಯಲ್ಲಿ ಅನುಭವ | – 10 ಅಂಕ |
| ಈ) ವಿದ್ಯಾರ್ಹತೆ | – 5 ಅಂಕ |
| **ಒಟ್ಟು** | – **25 ಅಂಕ** |

7) **ಆದ್ಯತೆಗಳು ನೀಡುವ ವರ್ಗಗಳು** – ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತರು, ಅಂಗವಿಕಲರು, ಮಹಿಳೆಯರು.

8) **ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು :**

ಅ) ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿಪಿಆರ್/186(1)/ಎಂಜಿನರೇಗಾ/2011 ದಿನಾಂಕ:10-01-2012 ಮತ್ತು ಎಂ.ಜಿ.ನರೇಗಾ ಸಾಮಾಜಿಕ ಪರಿಶೋಧನಾ ಸಂಘದ ಮಾನವ ಸಂಪನ್ಮೂಲ ನೀತಿ ನಿಯಮಗಳನ್ವಯ ಜಿಲ್ಲಾ ಸಂಯೋಜಕರು ಕೆಲಸ ನಿರ್ವಹಿಸಬೇಕಾಗಿದೆ.

ಆ) ಆಯ್ಕೆಯಾದ ಅಭ್ಯರ್ಥಿಗಳು ಸಾಮಾಜಿಕ ಪರಿಶೋಧನಾ ಸಂಘದ ಷರತ್ತು ಮತ್ತು ನಿಬಂಧನೆಗಳ ಸೇವಾ ಒಪ್ಪಂದ ಪತ್ರದನ್ವಯ ಕಾರ್ಯನಿರ್ವಹಿಸಲು ಬದ್ಧರಾಗಿರುವುದು.

ಇ) ನಿರ್ದೇಶನಾಲಯವು ವಹಿಸುವ ಯಾವುದೇ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

# ಮಾದರಿ

## ಜಿಲ್ಲಾ ಪಂಚಾಯತ್ ಕಾರ್ಯಾಲಯ

ದಿನಾಂಕ: / . /

**ಸಾಮಾಜಿಕ ಪರಿಶೋಧನಾ ಕಾರ್ಯಕ್ಕೆ (ಮಹಾತ್ಮಗಾಂಧಿ ನರೇಗಾ), ಜಿಲ್ಲಾ ಮಟ್ಟದಲ್ಲಿ --------- ಜಿಲ್ಲೆಯಲ್ಲಿ ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಹುದ್ದೆಯ ಸೇವೆಗಾಗಿ ಅರ್ಜಿ ಆಹ್ವಾನ ಪ್ರಕಟಣೆ.**

ಭಾರತ ಸರ್ಕಾರವು ಹೊರಡಿಸಿರುವ ದಿನಾಂಕ: 30-06-2011 ರ ಸಾಮಾಜಿಕ ಪರಿಶೋಧನಾ ನಿಯಮಗಳು 2011ರಡಿಯಲ್ಲಿ ಸಾಮಾಜಿಕ ಪರಿಶೋಧನಾ ನಿಯಮಾವಳಿಗಳನ್ನು ರೂಪಿಸಿ, ದಿನಾಂಕ: 10-01-2012ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಕಾಯ್ದೆ ನಿಯಮಗಳನ್ನು ಸಾಮಾಜಿಕ ಪರಿಶೋಧನೆ ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಸಾಮಾಜಿಕ ಪರಿಶೋಧನಾ ಸಂಘ ಬೆಂಗಳೂರು ರಚಿತವಾಗಿದೆ. ಸಾಮಾಜಿಕ ಪರಿಶೋಧನೆಗಾಗಿ ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಹುದ್ದೆ ಗುರುತಿಸಲ್ಪಟ್ಟಿದೆ. ಸದರಿ ಹುದ್ದೆಯ ಸೇವೆಗಾಗಿ ಆಯ್ಕೆ ಮಾಡಲು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ, ಜಿಲ್ಲಾ ಪಂಚಾಯತ್ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ.

ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಹುದ್ದೆಗಾಗಿ ಈ ಕೆಳಕಂಡ ನಿಬಂಧನೆಗಳನ್ವಯ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ಹುದ್ದೆಗಳು ಪ್ರಥಮವಾಗಿ ಒಂದು ವರ್ಷದ ಅವಧಿಯದ್ದಾಗಿರುತ್ತದೆ. ತೃಪ್ತಿಕರ ಸೇವೆಯ ಆಧಾರದ ಮೇಲೆ ನಂತರದ ಅವಧಿಯ ಸೇವೆಯನ್ನು ನವೀಕರಿಸಲಾಗುವುದು ಮತ್ತು ಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯುವುದು. ಇದು ಸರ್ಕಾರಿ ಸೇವೆ ಆಗಿರುವುದಿಲ್ಲ.

**ವಿಶೇಷ ಸೂಚನೆ:-**

1) ಅರ್ಜಿ ಜೊತೆಗೆ ಲಗತ್ತುಗಳು ಸ್ವಯಂ ದೃಢೀಕೃತಗೊಂಡಿರುವುದು.
2) ಅಪೂರ್ಣ ಅರ್ಜಿಗಳನ್ನು (ಲಗತ್ತುಗಳು ಇರದ, ಎಲ್ಲ ಕಾಲಂಗಳನ್ನು ಭರ್ತಿ ಮಾಡದ, ನಿಗದಿತ ನಮೂನೆಯಲ್ಲಿ ಸಲ್ಲಿಸದ) ಸಂಕ್ಷೇಪಿತಗೊಳಿಸಲು ಪರಿಗಣಿಸಲಾಗುವುದಿಲ್ಲ

# ಮಾದರಿ

## ಪತ್ರಿಕಾ ಪ್ರಕಟಣೆ

ದಿನಾಂಕ: / /

**ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರ ಹುದ್ದೆ ಸೇವೆಗಾಗಿ ಅರ್ಜಿ ಆಹ್ವಾನ ಪ್ರಕಟಣೆ.**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ವ್ಯಾಪ್ತಿಯ ಜಿಲ್ಲಾ ಮಟ್ಟದಲ್ಲಿ ಸೇವೆ ನೀಡಲು (ಮಹಾತ್ಮಗಾಂಧಿ ನರೇಗಾ ಯೋಜನೆ) ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲು ತೀರ್ಮಾನಿಸಲಾಗಿದೆ ಅದರಂತೆ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹುದ್ದೆಯ ವಿವರ, ಅರ್ಹತೆ, ಸಂಭಾವನೆ ಇತ್ಯಾದಿ ವಿವರಗಳನ್ನು (ಜಿಲ್ಲಾ ಪಂಚಾಯತ್ ವೆಬ್‌ಸೈಟ್ ವಿವರ ದಾಖಲಿಸುವುದು)ರಲ್ಲಿ ಪಡೆಯಬಹುದಾಗಿದೆ.

| | |
|---|---|
| ಹುದ್ದೆಯ ವಿವರ | : ಜಿಲ್ಲಾ ಸಾಮಾಜಿಕ ಪರಿಶೋಧನಾ ಸಂಯೋಜಕರು. |
| ವಯಸ್ಸಿನ ಅರ್ಹತೆ | : ಗರಿಷ್ಠ-35 |
| ಹುದ್ದೆಗಳ ಸಂಖ್ಯೆ | : (ನಿಮ್ಮ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ನಮೂದಿಸಬೇಕು) |
| ವಿದ್ಯಾರ್ಹತೆ | : ಪದವಿ ಪೂರ್ವ ಶಿಕ್ಷಣ ಮತ್ತು ಕಂಪ್ಯೂಟರ್ ಬಳಕೆ ಬಗ್ಗೆ ಜ್ಞಾನ |
| ಮಾಸಿಕ ಸಂಭಾವನೆ | : ರೂ. 20,000/- |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : |

(ಅರ್ಜಿ ನಮೂನೆಯನ್ನು ಜಿಲ್ಲಾ ಪಂಚಾಯತ್ ವೆಬ್‌ಸೈಟ್‌ನಲ್ಲಿ* ಡೌನ್‌ಲೋಡ್ ಮಾಡಿಕೊಂಡು ನಿಗಧಿತ ನಮೂನೆಯಲ್ಲಿಯೇ ಅರ್ಜಿ ಸಲ್ಲಿಸುವುದು.)

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ

*ಸಂಬಂಧಪಸಿದ ಜಿಲ್ಲಾ ಪಂಚಾಯತ್‌ನ ವೈಬ್‌ಸೈಟ್ ವಿವರ ನಮೂದಿಸುವುದು.